# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1140
ಮಾನ್ಯ ಸದಸ್ಯರ ಹೆಸರು : ಶ್ರೀ ಎಸ್.ಎಲ್.ಭೋಜೇಗೌಡ
ಉತ್ತರಿಸುವ ದಿನಾಂಕ : 23-02-2024
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಇವುಗಳ ಅಡಿಯಲ್ಲಿ ಬರುವ ಜಾತಿ/ ಉಪಜಾತಿಯೆಷ್ಟು; ಸಂಪೂರ್ಣ ವಿವರಗಳೊಂದಿಗೆ ಮಾಹಿತಿ ನೀಡುವುದು; | ಭಾರತ ಸರ್ಕಾರದ ಅಧಿಸೂಚನೆಯಲ್ಲಿ ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದಂತೆ, ಪರಿಶಿಷ್ಟ ಜಾತಿ ಪಟ್ಟಿಯಲ್ಲಿ **101** ಜಾತಿಗಳನ್ನು ನಮೂದಿಸಲಾಗಿರುತ್ತದೆ. ಜಾತಿಗಳ ವಿವರದ ಪಟ್ಟಿಯನ್ನು ಅನುಬಂಧ-1 ರಲ್ಲಿ ನೀಡಿದೆ.<br>ಪರಿಶಿಷ್ಟ ಪಂಗಡಕ್ಕೆ ಸಂಬಂಧಿಸಿದ ಜಾತಿಗಳ ವಿವರವನ್ನು ಅನುಬಂಧ-2 ರಲ್ಲಿ ನೀಡಿದೆ. |
| ಆ) | ಇವರ ಅಭಿವೃದ್ಧಿಗಾಗಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; (ವಿವರವಾದ ಮಾಹಿತಿ ನೀಡುವುದು) | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಅಭಿವೃದ್ಧಿಗಾಗಿ ಈ ಕೆಳಕಂಡಂತೆ ಕ್ರಮ ಕೈಗೊಳ್ಳಲಾಗಿದೆ.<br>1. ಸರ್ಕಾರಿ ಹುದ್ದೆಗಳಲ್ಲಿ ಮತ್ತು ಶಿಕ್ಷಣ ಸಂಸ್ಥೆಗಳಲ್ಲಿ ಮೀಸಲಾತಿ ಕಲ್ಪಿಸಲಾಗಿದೆ.<br>2. ಸಮಾಜ ಕಲ್ಯಾಣ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಗಳ ಅಡಿ ಬರುವ ನಿಗಮಗಳಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಅಭಿವೃದ್ಧಿಗಾಗಿ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br>3. ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಜನಸಂಖ್ಯೆಗನುಗುಣವಾಗಿ ಅಭಿವೃದ್ಧಿ ಯೋಜನೆಗಳಿಗೆ ನಿಗಧಿಪಡಿಸಿದ ಅನುದಾನದಲ್ಲಿ ವಿವಿಧ ಕಾರ್ಯಕ್ರಮಗಳಿಗೆ ಮತ್ತು ವಿವಿಧ ಇಲಾಖೆಗಳಿಗೆ ಅನುದಾನ ಒದಗಿಸಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br>4. KTPP ಕಾಯ್ದೆಯಡಿ ರೂ.1.00 ಕೋಟಿ ಅಂದಾಜು ವೆಚ್ಚದ ಕಾಮಗಾರಿಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮೀಸಲಾತಿ ಕಲ್ಪಿಸಲಾಗಿದೆ. |

| | | |
|---|---|---|
| ಇ) | ಕಳೆದ ವರ್ಷದ ರಾಜ್ಯ ಅಭಿವೃದ್ಧಿ ಪರಿಷತ್ ಸಭೆಯು ಯಾವಾಗ ನಡೆಯಿತು; ಸಭೆಯ ನಡವಳಿಯ ಪ್ರತಿಯನ್ನು ನೀಡುವುದು; | 2023-24ನೇ ಸಾಲಿನಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯ ರಾಜ್ಯ ಅಭಿವೃದ್ಧಿ ಪರಿಷತ್ ಸಭೆಯು ದಿನಾಂಕ:31.07.2023 ರಂದು ನಡೆದಿದ್ದು, ನಡವಳಿಯ ಪ್ರತಿಯನ್ನು ಅನುಬಂಧ-3 ರಲ್ಲಿ ನೀಡಿದೆ. |
| ಈ) | ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಸಮುದಾಯಗಳಲ್ಲಿ ಹೋರಾಟಕ್ಕಾಗಿ ನೋಂದಾವಣೆಗೊಂಡಿರುವ ಎನ್.ಜಿ.ಒಗಳು ಯಾವುವು? (ಹೆಸರು ವಿಳಾಸದೊಂದಿಗೆ ಮಾಹಿತಿ ನೀಡುವುದು) | ಸಮಾಜ ಕಲ್ಯಾಣ ಇಲಾಖೆಯಿಂದ ಯಾವುದೇ ಎಜ್.ಜಿ.ಓ ಗಳನ್ನು ನೊಂದಣಿ ಮಾಡಿರುವುದಿಲ್ಲ. ಸಂಬಂಧಿತ ನೊಂದಾಯಿತ ಕಾಯಿದೆಗಳ ಅಡಿಯಲ್ಲಿ ನೊಂದಣಿಯಾಗಿರುತ್ತದೆ. |

**ಸಕಇ 90 ಎಸ್‌ಎಲ್‌ಪಿ 2024**

**(ಡಾ: ಹೆಚ್.ಸಿ.ಮಹದೇವಪ್ಪ)**
**ಸಮಾಜ ಕಲ್ಯಾಣ ಸಚಿವರು**

ಅನುಬಂಧ-1

**PART-IV**

**SECTION 1-B**

**GENERAL ACTS AND ORDINANCES**

**LAW AND PARLIMENTARY AFFAIRS SECRETARIAT**

**NOTIFICATION NO. LAW 58 LCR 77**

**Bangalore, Dated the 3rd September 1977**

Ordered that the following Notification No. BC 12016/34/76 SCT-V, Dated: 27th July 1977 of the Government of India (Ministry of Home Affairs) be published in the Karnataka Gazettee for general information.

By order and in the name of the Governor of Karnataka.

**A. NEELAKANRARAYA,**
Under Secretary to Government
Department of Law & Parliamentary Affairs.

No. BC-12016/34/76-SCT-V

GOVERNMENT OF INDIA/BHARATH SARKAR

1. Ministry of Home Affairs/Grih Manthralaya,

New Delhi-110 001, dated: 27th July 1977.
(5 Sra 1899)

## NOTIFICATION

In exercise of the powers conferred by sub-section (2) of section 1 of the Scheduled Castes and Scheduled Tribes Orders (Amendment) Act, 1976 (108 of 1976), the Central Government hereby appoints the 27th day of July 1977 as the date on which the said Act shall come into force.

**ISHWAR CHANDRA**
Additional Secretary to the Govt.
of India, Tel. No.373274

## SCH.CASTE LIST

| Sl. No. | Name of the Sub-caste | Sl. No. | Name of the Sub-caste |
|---|---|---|---|
| 1. | Adi Andhra | 19. | Beda Jangam, Budga Jangam |
| 2. | Adi Dravida | 20. | Bellara |
| 3. | Adi Karnataka | 21. | Bhangi, Mehtar, Olgana, Rukhi, Malkana, Halalkhor, Lalbegi, Balmiki, Korar, Zadmalli |
| 4. | Adiya (in Coorg District) | 22. | Bhambi, Bhambhi, Asadaru, Asodi, Chammadia, Chamar, Chambhar, Chamgar, Haralayya, Harali, Khalpa, Machigor, Mochigar, Madar, Madig, Mochi, Muchi, Telegu Mochi, Kamati Mochi, Ranigar, Rohidas, Rohit, Samagar |
| 5. | Ager | | |
| 6. | Ajila | 23. | Bhovi & Synonum Castes are Od, Odde, Vaddar, Waddar, Voddar, Woddar |
| 7. | Anamuk | 24. | Bindla |
| 8. | Aray Mala | 25. | Byagara |
| 9. | Arunthathiyar | 26. | Chakkiliyan |
| 10. | Arwa Mala | 27. | Chalavadi, Chalvadi, Channayya |
| 11. | Baira | 28. | Chandala |
| 12. | Bakad | 29. | Chenna Dasar, Holaya Dasar |
| 13. | Bant (in Belgaum, Bijapur, Dharwad & North Kanara Districts) | 30. | Dakkal, Dokkalwar |
| 14. | Bakuda | 31. | Dakkaliga |
| 15. | Balagai | 32. | Dhor, Kakkayya, Kankayya |
| 16. | Bandi | 33. | Dom, Dombara, Paidi, Pano |

| | |
|---|---|
| 17. | Banjara, Lambani & Synonym Castes are Lambada, Lambadi, Lamani, Sugali, Sukali |
| 18. | Bathada |

| | |
|---|---|
| 34. | Ellamalwar, Yellammalawandlu |
| 35. | Ganti Chores |

| | |
|---|---|
| 36. | Garoda, Garo |
| 37. | Godda |
| 38. | Gosangi |
| 39. | Haleer |
| 40. | Halsar, Haslar, Hulasvar, Halasvar |
| 41. | Handi Jogis |
| 42. | Hasla |
| 43. | Holar, Valhar |
| 44. | Holaya, Holer, Holeya |
| 45. | Holeya Dasari |
| 46. | Jaggali |
| 47. | Jambuvulu |
| 48. | Kadaiyan |
| 49. | Kalladi |
| 50. | Kepmaris |
| 51. | Kolupulvandlu |
| 52. | Koosa |
| 53. | Koracha & Synonym Castes are Korachar |

| | |
|---|---|
| 56. | Kudumban |
| 57. | Kuravan |
| 58. | Lingader |
| 59. | Machala |
| 60. | Madari |
| 61. | Madiga |
| 62. | Mahar, Taral, Dhegu Megu |
| 63. | Mahyavanshi, Dhed, Vankar, Maru Vankar |
| 64. | Maila |
| 65. | Mala |
| 66. | Mala Dasari |
| 67. | Mala Hannai |
| 68. | Mala Jangam |
| 69. | Mala Masti |
| 70. | Mala Sale, Netkani |
| 71. | Mala Sanyasi |
| 72. | Mang, Matang, Minimadig |
| 73. | Mang Garudi, Mang Garodi |

| | |
|---|---|
| 54. | Korama & Synonym Castes are Korava, Koravar |
| 55. | Kotegar, Metri |

| | |
|---|---|
| 74. | Manne |
| 75. | Masthi |

| | |
|---|---|
| 76. | Mavilan |
| 77. | Meghval, Menghvar |
| 78. | Moger |
| 79. | Mukri |
| 80. | Mundala |
| 81. | Nadia, Hadi |
| 82. | Nalkadaya |
| 83. | Nalakeyava |
| 84. | Nayadi |
| 85. | Pale |
| 86. | Pallan |
| 87. | Pambada |
| 88. | Panchama |
| 89. | Panniandi |

| | |
|---|---|
| 90. | Paraiyan, Paraya |
| 91. | Paravan |
| 92. | Raneyar |
| 93. | Samagara |
| 94. | Samban |
| 95. | Sapari |
| 96. | Sillekyathas |
| 97. | Sindhollu, Chindollu |
| 98. | Sudugadu Siddha |
| 99. | Thoti |
| 100. | Tirgar, Tirbanda |
| 101. | Valluvan |

ಅನುಬಂಧ - 2



*Constitution (Scheduled Tribes) Order,* 1950
(PART III.— Rules and Orders under the Constitution)

PART VI.—*Karnataka*

1. Adiyan
2. Barda
3. Bavacha, Bamcha
4. Bhil, Bhil Garasia, Dholi Bhil, Dungri Bhil, Dungri Garasia, Mewasi Bhil, Rawal Bhil, Tadvi Bhil, Bhagalia, Bhilala, Pawra, Vasava, Vasave
5. Chenchu, Chenchwar
6. Chodhara
7. Dubla, Talavia, Halpati
8. Gamit, Gamta, Gavit, Mavchi, Padvi, Valvi
9. Gond, Naikpod, Rajgond
10. Gowdalu
11. Hakkipikki
12. Hasalaru
13. Irular
14. Iruliga
15. Jenu Kuruba
16. Kadu Kuruba
17. Kammara (in South Kanara district and Kollegal taluk of Mysore district)
18. Kanivan, Kanyan (in Kollegal taluk of Mysore district)
19. Kathodi, Katkari, Dhor Kathodi, Dhor Katkari, Son Kathodi, Son Katkari
20. Kattunayakan
21. Kokna, Kokni, Kukna
22. Koli Dhor, Tokre Koli, Kolcha, Kolgha
23. Konda Kapus
24. Koraga
25. Kota
26. Koya, Bhine Koya, Rajkova
27. Kudiya, Melakudi
28. Kuruba (in Coorg district)
29. Kurumanas
30. Maha Malasar
31. Malaikudi
32. Malasar
33. Malayekandi
34. Maleru
35. Maratha (in Coorg District)
36. Marati (in South Kanara district)
37. Meda [1][Medari, Gauriga, Burud]
38. Naikda, Nayaka, Chollivala Nayaka, Kapadia Nayaka, Mota Nayaka, Nana Nayaka, [2][Naik, Nayak, Beda Bedar and Valmiki]
39. Palliyan
40. Paniyan
41. Pardhi, Advichincher, Phanse Pardhi [1][Haranshi-kari]
42. Patelia
43. Rathawa
44. Sholaga
45. Soligaru
46. Toda
47. Varli
48. Vitolia, Kotwalia, Barodia
49. Yerava

[1][50. Siddi (in Uttar Kannada district.]

---

1. Ins. by Act 10 of 2003, s. 4 and the Second Sch
2. Ins. by Act 39 of 1991, s. 2 (w.e.f. 19-4-1991)

# [1]THE CONSTITUTION (SCHEDULED TRIBES) ORDER, 1950

## C.O. 22

In exercise of the powers conferred by clause (1) of article 342 of the Constitution of India, the President, after consultation with the Governors and Rajpramukhs of the States concerned, is pleased to make the following Order, namely:--

1. This Order may be called the Constitution (Scheduled Tribes) Order, 1950.

2. The Tribes or tribal communities, or parts of, or groups within, tribes or tribal communities, specified in [2][Parts I to [3][XXII] of the Schedule to this Order shall, in relation to the States to which those Parts respectively relate, be deemed to be Scheduled Tribes so far as regards members thereof residents in the localities specified in relation to them respectively in those Parts of that Schedule.

[4][3. Any reference in this Order to State or to a district or other territorial division thereof shall be construed as a reference to the State, district or other territorial division as constituted on the 1st day of May, 1976.]

---

1. Published with the Ministry of Law Notfn. No. S.R.O. 510, dated the 6th September, 1950, Gazette of India Extraordinary, 1950, Part II, Section 3, page 597
2. Subs. by the Scheduled Castes and Scheduled Tribes Lists (Modification) Order, 1956.
3. The figure 'XVIII' has been successively subs. by Act 18 of 1987, s. 19 and the Second Sch. (w.e.f. 30.5.87) by Act 28 of 2000, s. 20 and the Fourth Sch. (w.e.f. 1-11-2000) by Act 29 of 2000, s. 25 and the Sixth Sch. (w.e.f. 9-11-2000) and Act No. 30 of 2000, s. 24 and the Sixth Sch. (w.e.f. 15-11-2000) to read as above.
4. Subs. by Act 108 of 1976, s. 4 and the Second Sch., for paragraph 3 (w.e.f. 27-7-1977)

रजिस्ट्री सं० डी० एल०—(एन)04/0007/2003—20 REGISTERED NO. DL—(N)04/0007/2003—20

# भारत का राजपत्र
# The Gazette of India

सी.जी.-डी.एल.-अ.-20032020-218817
CG-DL-E-20032020-218817

असाधारण
EXTRAORDINARY
भाग II — खण्ड 1
PART II — Section 1
प्राधिकार से प्रकाशित
PUBLISHED BY AUTHORITY

सं० 12] नई दिल्ली, शुक्रवार, मार्च 20, 2020/ फाल्गुन 30, 1941 (शक)
No. 12] NEW DELHI, FRIDAY, MARCH 20, 2020/PHALGUNA 30, 1941 (SAKA)

इस भाग में भिन्न पृष्ठ संख्या दी जाती है जिससे कि यह अलग संकलन के रूप में रखा जा सके।
Separate paging is given to this Part in order that it may be filed as a separate compilation.

## MINISTRY OF LAW AND JUSTICE
(Legislative Department)

*New Delhi, the 20th March, 2020/Phalguna* 30, 1941 (*Saka*)

The following Act of Parliament received the assent of the President on the 19th March, 2020, and is hereby published for general information:—

## THE CONSTITUTION (SCHEDULED TRIBES) ORDER (AMENDMENT) ACT, 2020

No. 4 OF 2020

[19*th March*, 2020.]

**An Act further to amend the Constitution (Scheduled Tribes) Order, 1950 to modify the list of the Scheduled Tribes in the State of Karnataka.**

Be it enacted by Parliament in the Seventy-first Year of the Republic of India as follows:—

1. This Act may be called the Constitution (Scheduled Tribes) Order (Amendment) Act, 2020. **Short title.**

C.O. 22. 2. In the Constitution (Scheduled Tribes) Order, 1950, in the Schedule, in Part VI.— Karnataka,— **Amendment of Constitution (Scheduled Tribes) Order, 1950.**

(*a*) in entry 38, for the words "Naikda, Nayaka", the words and brackets "Naikda, Nayaka (including Parivara and Talawara)" shall be substituted;

Scanned with CamScanner

(*b*) in entry 50, for the brackets and words "(in Uttar Kannada district)", the brackets and words "(in Belagavi, Dharwad and Uttar Kannada districts)" shall be substituted.

---

DR. G. NARAYANA RAJU,
*Secretary to the Govt. of India.*

UPLOADED BY THE MANAGER, GOVERNMENT OF INDIA PRESS, MINTO ROAD, NEW DELHI-110002
AND PUBLISHED BY THE CONTROLLER OF PUBLICATIONS, DELHI-110054.

MGIPMRNO—5199GI(S3)—20-03-2020

Scanned with CamScanner

ಅನುಬಂಧ-3

ಅನುಬಂಧ-3

# ಸಮಾಜ ಕಲ್ಯಾಣ ಇಲಾಖೆ

**ಸನ್ಮಾನ್ಯ ಮುಖ್ಯಮಂತ್ರಿಗಳು ಮತ್ತು ಅಧ್ಯಕ್ಷರು ರಾಜ್ಯ ಅನುಸೂಚಿತ ಜಾತಿಗಳ/ಅನುಸೂಚಿತ ಪಂಗಡಗಳ ಅಭಿವೃದ್ಧಿ ಪರಿಷತ್ ಇವರ ಅಧ್ಯಕ್ಷತೆಯಲ್ಲಿ 2023-24ನೇ ಸಾಲಿನ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಕ್ರಿಯಾ ಯೋಜನೆಯ ಬಗ್ಗೆ ದಿನಾಂಕ: 31.07.2023 ರಂದು ನಡೆದ ಸಭೆಯ ನಡವಳಿಗಳು**

**ಸಭೆಗೆ ಹಾಜರಾದವರ ವಿವರ:-**

| ಕ್ರ.ಸಂ | ಹೆಸರು | ಪದನಾಮ |
|---|---|---|
| 1. | ಶ್ರೀ ಸಿದ್ದರಾಮಯ್ಯ.<br>ಸನ್ಮಾನ್ಯ ಮುಖ್ಯಮಂತ್ರಿಗಳು. | ಅಧ್ಯಕ್ಷರು |
| 2. | ಡಾ. ಹೆಚ್.ಸಿ.ಮಹದೇವಪ್ಪ<br>ಮಾನ್ಯ ಸಮಾಜ ಕಲ್ಯಾಣ ಸಚಿವರು | ಉಪಾಧ್ಯಕ್ಷರು |
| 3. | ಶ್ರೀ ಬಿ. ನಾಗೇಂದ್ರ<br>ಮಾನ್ಯ ಪರಿಶಿಷ್ಟ ವರ್ಗಗಳ ಕಲ್ಯಾಣ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು. | ವಿಶೇಷ ಆಹ್ವಾನಿತರು |
| 4. | ಶ್ರೀ ಹೆಚ್.ಕೆ. ಪಾಟೀಲ್<br>ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು. ಶಾಸನ ರಚನಾ ಹಾಗೂ ಪ್ರವಾಸೋದ್ಯಮ ಸಚಿವರು | ಸದಸ್ಯರು |
| 5. | ಶ್ರೀ ಪ್ರಿಯಾಂಕ್ ಖರ್ಗೆ.<br>ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಐ.ಟಿ.ಬಿ.ಟಿ.. ಸಚಿವರು. | ಸದಸ್ಯರು |
| 6. | ಡಾ. ಎಂ.ಸಿ. ಸುಧಾಕರ್.<br>ಮಾನ್ಯ ಉನ್ನತ ಶಿಕ್ಷಣ ಸಚಿವರು | ಸದಸ್ಯರು |
| 7. | ಡಾ. ಎಲ್. ಹನುಮಂತಯ್ಯ.<br>ಮಾನ್ಯ ರಾಜ್ಯಸಭಾ ಸದಸ್ಯರು | ಸದಸ್ಯರು |
| 8. | ಶ್ರೀ ಎಂ.ಪಿ. ನರೇಂದ್ರ ಸ್ವಾಮಿ.<br>ಮಾನ್ಯ ಶಾಸಕರು. ಮಳವಳ್ಳಿ ವಿಧಾನಸಭಾ ಕ್ಷೇತ್ರ | ಸದಸ್ಯರು |
| 9. | ಶ್ರೀ ಪ್ರಸಾದ್ ಅಬ್ಬಯ್ಯ.<br>ಮಾನ್ಯ ಶಾಸಕರು. ಹುಬ್ಬಳ್ಳಿ-ಧಾರವಾಡ (ಪೂರ್ವ) ವಿಧಾನಸಭಾ ಕ್ಷೇತ್ರ | ಸದಸ್ಯರು |
| 10. | ಶ್ರೀ ಇ. ತುಕಾರಾಂ.<br>ಮಾನ್ಯ ಶಾಸಕರು. ಸಂಡೂರು ವಿಧಾನಸಭಾ ಕ್ಷೇತ್ರ. | ಸದಸ್ಯರು |
| 11. | ಶ್ರೀ ಪ್ರಕಾಶ್ ರಾಥೋಡ್.<br>ಮಾನ್ಯ ವಿಧಾನಸಭಾ ಪರಿಷತ್ ಸದಸ್ಯರು. | ಸದಸ್ಯರು |
| 12. | ಶ್ರೀಮತಿ ವಂದಿತಾ ಶರ್ಮಾ. ಭಾ.ಆ.ಸೇ.<br>ಸರ್ಕಾರದ ಮುಖ್ಯ ಕಾರ್ಯದರ್ಶಿ. ಕರ್ನಾಟಕ ಸರ್ಕಾರ | ಸದಸ್ಯರು |
| 13. | ಶ್ರೀ ರಮಣ ರೆಡ್ಡಿ . ಭಾ.ಆ.ಸೇ.<br>ಅಭಿವೃದ್ಧಿ ಆಯುಕ್ತರು ಹಾಗೂ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ | ಸದಸ್ಯರು |
| 14. | ಶ್ರೀ ಎಲ್. ಅತೀಕ್. ಭಾ.ಆ.ಸೇ.<br>ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ. ಆರ್ಥಿಕ ಇಲಾಖೆ. | ಸದಸ್ಯರು |

| ಕ್ರ.ಸಂ | ಹೆಸರು | ಪದನಾಮ |
|---|---|---|
| 15. | ಶ್ರೀಮತಿ ಶಾಲಿನಿ ರಜನೀಶ್. ಭಾ.ಆ.ಸೇ.<br>ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ. ಯೋಜನಾ ಮತ್ತು ಸಾಂಖ್ಯಿಕ ಇಲಾಖೆ | ಸದಸ್ಯರು |
| 16. | ಮೇಜರ್ ಪಿ. ಮಣಿವಣ್ಣನ್ ಭಾ.ಆ.ಸೇ<br>ಸರ್ಕಾರದ ಪ್ರಧಾನ ಕಾರ್ಯದರ್ಶಿ. ಸಮಾಜ ಕಲ್ಯಾಣ ಇಲಾಖೆ. | ಸದಸ್ಯ ಕಾರ್ಯದರ್ಶಿ |
| 17. | ಶ್ರೀ ಡಾ. ರಜನೀಶ್ ಗೋಯಲ್. ಭಾ.ಆ.ಸೇ.<br>ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ | ಸನ್ಮಾನ್ಯ ಮುಖ್ಯಮಂತ್ರಿಗಳ ಅಪರ ಮುಖ್ಯ ಕಾರ್ಯದರ್ಶಿ |
| 18. | ಡಾ. ಇ. ವೆಂಕಟಯ್ಯ. ಭಾ.ಆ.ಸೇ (ನಿ) | ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ನೋಡಲ್ ಏಜೆನ್ಸಿ ಸಲಹೆಗಾರರು. |
| 19. | ಉಪ ಯೋಜನೆಗಳನ್ನು ಅನುಷ್ಠಾನ ಮಾಡುತ್ತಿರುವ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿಗಳು/ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು ಹಾಗೂ ಇಲಾಖಾ ಮುಖ್ಯಸ್ಥರು | ಅನುಷ್ಠಾನ ಅಧಿಕಾರಿಗಳು (ವಿಶೇಷ ಆಹ್ವಾನಿತರು) |

ಆಯುಕ್ತರು. ಸಮಾಜ ಕಲ್ಯಾಣ ಇಲಾಖೆ ಇವರು. ರಾಜ್ಯ ಅಭಿವೃದ್ಧಿ ಪರಿಷತ್ತಿನ ಅಧ್ಯಕ್ಷರಾದ ಮಾನ್ಯ ಮುಖ್ಯಮಂತ್ರಿಗಳನ್ನು. ಉಪಾಧ್ಯಕ್ಷರಾದ ಮಾನ್ಯ ಸಮಾಜ ಕಲ್ಯಾಣ ಸಚಿವರನ್ನು. ಸದಸ್ಯರಾದ ಮಾನ್ಯ ಸಚಿವರುಗಳನ್ನು ಮತ್ತು ರಾಜ್ಯ ಪರಿಷತ್ತಿನ ಎಲ್ಲಾ ನಾಮನಿರ್ದೇಶಿತ ಸದಸ್ಯರನ್ನು ಸಭೆಗೆ ಸ್ವಾಗತಿಸಿದರು. ಅದೇ ರೀತಿ. ಎಲ್ಲಾ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿಗಳು. ಪ್ರಧಾನ ಕಾರ್ಯದರ್ಶಿಗಳು. ಕಾರ್ಯದರ್ಶಿಗಳು ಮತ್ತು ಸಭೆಗೆ ಹಾಜರಾದ ಎಲ್ಲಾ ಇಲಾಖಾ ಮುಖ್ಯಸ್ಥರು ಹಾಗೂ ಅಧಿಕಾರಿಗಳನ್ನು ಸ್ವಾಗತಿಸಿ ಸಭೆ ಪ್ರಾರಂಭಿಸಲು ಮಾನ್ಯ ಅಧ್ಯಕ್ಷರ ಅನುಮೋದನೆ ಕೋರಿದರು.

ಮಾನ್ಯ ಅಧ್ಯಕ್ಷರ ಅನುಮತಿ ಮೇರೆಗೆ ಆಯುಕ್ತರು. ಸಮಾಜ ಕಲ್ಯಾಣ ಇಲಾಖೆ ಇವರು ಪ.ಜಾತಿ/ಪ.ಪಂಗಡದವರ ಅಭಿವೃದ್ಧಿಗೆ 2023-24ನೇ ಸಾಲಿನಲ್ಲಿ ಎಲ್ಲಾ ಇಲಾಖೆಗಳಿಗೆ ಹಂಚಿಕೆ ಮಾಡಿರುವ ಒಟ್ಟು ರೂ.34.293.69 ಕೋಟಿಗಳ ಅನುದಾನವನ್ನು ವಿವಿಧ ಕಾರ್ಯಕ್ರಮಗಳಿಗೆ ಉಪಯೋಗಿಸುವ ಬಗ್ಗೆ ದಿನಾಂಕ: 25.07.2023 ರಂದು ನೋಡಲ್ ಏಜೆನ್ಸಿ ಸಭೆಯಲ್ಲಿ ಚರ್ಚಿಸಿ. ಸದರಿ ಸಭೆಯ ಶಿಫಾರಸ್ಸುಗಳೊಂದಿಗೆ ರಾಜ್ಯ ಅಭಿವೃದ್ಧಿ ಪರಿಷತ್ತಿನ ಅನುಮೋದನೆಗಾಗಿ ಮಂಡಿಸಲಾಗಿದೆ. ಇಂದಿನ ರಾಜ್ಯ ಅಭಿವೃದ್ಧಿ ಪರಿಷತ್ತಿನ ಸಭೆಯಲ್ಲಿ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅಡಿ ಪ್ರಸ್ತಾಪಿಸಿರುವ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲು ಕೋರಿದರು.

**ಅಜೆಂಡಾ -1 : 2022-23ನೇ ಸಾಲಿನಲ್ಲಿ ಸಾಧಿಸಿದ ಪ್ರಗತಿ ವಿವರದ ಬಗ್ಗೆ ಈ ಕೆಳಗಿನಂತೆ ವಿವರಿಸಲಾಗಿದೆ.**

(ರೂ. ಕೋಟಿಗಳಲ್ಲಿ)

| ವಿವರ | ಮೂಲ ಹಂಚಿಕೆ | ಪರಿಷ್ಕೃತ ಹಂಚಿಕೆ | ಬಿಡುಗಡೆ | ವೆಚ್ಚ | ಹಂಚಿಕೆಗೆ% | ಬಿಡುಗಡೆಗೆ% |
|---|---|---|---|---|---|---|
| ಎಸ್.ಸಿ.ಎಸ್.ಪಿ | 20112.46 | 21795.56 | 21335.06 | 21276.56 | 98% | 99.73% |
| ಟಿ.ಎಸ್.ಪಿ | 8121.87 | 8468.21 | 8105.13 | 8077.19 | 95% | 99.66% |
| **ಒಟ್ಟು** | **28234.33** | **30263.77** | **29440.19** | **29353.76** | **97%** | **99.71%** |

2022-23ನೇ ಸಾಲಿನಲ್ಲಿ ಇಲಾಖಾವಾರು ಆರ್ಥಿಕ ಪ್ರಗತಿಯ ವಿವರಗಳನ್ನು ಕ್ರಿಯಾ ಯೋಜನೆಯಲ್ಲಿ ನೀಡಲಾಗಿದೆ.

**ಅಜೆಂಡಾ-2 : 2023-24ನೇ ಸಾಲಿನ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಹಂಚಿಕೆ ಈ ಕೆಳಗಿನಂತಿದೆ.**

(ರೂ. ಕೋಟಿಗಳಲ್ಲಿ)

| ವಿವರ | ಎಸ್.ಸಿ.ಎಸ್.ಪಿ | ಟಿ.ಎಸ್.ಪಿ | ಒಟ್ಟು |
|---|---|---|---|
| ರಾಜಸ್ವ | 20.237.51 | 8.525.50 | 28.763.01 |
| ಬಂಡವಾಳ | 4.095.84 | 1.434.84 | 5.530.68 |
| **ಒಟ್ಟು** | **24,333.35** | **9,960.34** | **34,293.69** |

2023-24ನೇ ಸಾಲಿನಲ್ಲಿ ಒಟ್ಟು ಆಯವ್ಯಯ ರೂ.3.28 ಲಕ್ಷ ಕೋಟಿಗಳು. ಅದರ ಪೈಕಿ ಅಭಿವೃದ್ಧಿ ಕಾರ್ಯಕ್ರಮಗಳಿಗೆ ರೂ.1.42 ಲಕ್ಷ ಕೋಟಿ ನಿಗದಿಪಡಿಸಿದ್ದು. ಅದರಲ್ಲಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಗೆ 24.10% ರಂತೆ ಬಳಕೆಯಾಗದ ಮೊತ್ತ ರೂ72.20 ಕೋಟಿ ಸೇರಿ ರೂ.34.293.69 ಕೋಟಿಗಳ ಅನುದಾನವನ್ನು ಒದಗಿಸಲಾಗಿದೆ.

ಮಾನ್ಯ ಸಮಾಜ ಕಲ್ಯಾಣ ಸಚಿವರು ಮಾತನಾಡಿ. ಮಾನ್ಯ ಮುಖ್ಯಮಂತ್ರಿಗಳು ತಮ್ಮ ಹಿಂದಿನ ಅಧಿಕಾರದ ಅವಧಿಯಲ್ಲಿ ಎಸ್.ಸಿ/ಎಸ್.ಟಿ ಜನರ ಸಮಗ್ರ ಅಭಿವೃದ್ಧಿಗಾಗಿ ಮತ್ತು ಸಂವಿಧಾನದ ಆಶಯಕ್ಕೆ ಅನುಗುಣವಾಗಿ ಐತಿಹಾಸಿಕ ಕಾಯ್ದೆಯಾದ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅಧಿನಿಯಮವನ್ನು ಜಾರಿಗೆ ತಂದಿದ್ದು. ಪ್ರಸಕ್ತ ಅವಧಿಯಲ್ಲಿ ಅಧಿಕಾರ ವಹಿಸಿಕೊಂಡ ಬಳಿಕ ಡೀಮ್ಡ್ ವೆಚ್ಚವನ್ನು ತಡೆಗಟ್ಟಲು ಸದರಿ ಕಾಯ್ದೆಯ ಸೆಕ್ಷನ್ 7(ಡಿ) ಯನ್ನು ರದ್ದುಪಡಿಸಲು ಘೋಷಿಸಿರುತ್ತಾರೆ. ಅಲ್ಲದೇ. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ಬಹುದಿನಗಳ ಬೇಡಿಕೆಯಾದ ಪಿ.ಟಿ.ಸಿ.ಎಲ್ ಕಾಯ್ದೆಗೆ ತಿದ್ದುಪಡಿ ತರಲಾಗಿದೆ. ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯವು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಸದರಿ ಸಂಸ್ಥೆಯನ್ನು ಬಲಪಡಿಸಲು ಕ್ರಮಕೈಗೊಳ್ಳಲಾಗುತ್ತಿದೆ. ಅಂದಾಜು ವೆಚ್ಚ ರೂ. ಒಂದು ಕೋಟಿ ಇರುವ ಕಾಮಗಾರಿಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಗುತ್ತಿಗೆದಾರರಿಗೆ ಮೀಸಲಾತಿ ಕಲ್ಪಿಸುವ ಬಗ್ಗೆ ಕೆ.ಟಿ.ಪಿ.ಪಿ ಕಾಯ್ದೆಗೆ ತಿದ್ದುಪಡಿ ತರಲಾಗಿದೆ. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ಸಮಗ್ರ ಅಭಿವೃದ್ಧಿಗಾಗಿ ಇಂತಹ ಮಹತ್ತರ ನಿರ್ಣಯಗಳನ್ನು ತೆಗೆದುಕೊಂಡಿರುವ ಮಾನ್ಯ ಮುಖ್ಯಮಂತ್ರಿಗಳಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಎಂದು ಹೇಳಿದರು.

ಮುಂದುವರೆದು. ನೋಡಲ್ ಏಜೆನ್ಸಿ ಸಭೆಯಲ್ಲಿ ಎಲ್ಲಾ ಇಲಾಖೆಗಳಿಗೆ ಹಂಚಿಕೆ ಮಾಡಿರುವ ಅನುದಾನದ ಬಗ್ಗೆ ವಿವರವಾಗಿ ಚರ್ಚಿಸಿದ್ದು. ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಕಾರ್ಯಕ್ರಮಗಳಿಗೆ ನೀಡಿರುವ ಅನುದಾನವನ್ನು ಎಸ್.ಸಿ/ಎಸ್.ಟಿ ಫಲಾನುಭವಿಗಳಿಗೆ ಮಾತ್ರ ಉಪಯೋಗಿಸಬೇಕಾಗಿದೆ ಮತ್ತು ಫಲಾನುಭವಿಗಳ ನಿಖರ ಅಂಕಿ-ಅಂಶಗಳನ್ನು ಸಮಾಜ ಕಲ್ಯಾಣ ಇಲಾಖೆಗೆ ಒದಗಿಸುವಂತೆ ಸಹ ಸೂಚಿಸಲಾಗಿದೆ ಎಂದು ತಿಳಿಸಿದರು. ಮುಂದಿನ ನೋಡಲ್ ಏಜೆನ್ಸಿ ಸಭೆಯಲ್ಲಿ ಸಹ ಈ ಬಗ್ಗೆ ಮರು ಪರಿಶೀಲಿಸಿ ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದರು. ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಕಾರ್ಯಕ್ರಮಗಳ ಅನುಷ್ಠಾನದಿಂದ ಆಗಿರುವ ಪರಿಣಾಮಗಳ ಬಗ್ಗೆ ISEC ಸಂಸ್ಥೆಯ ಮೂಲಕ ಮೌಲ್ಯಮಾಪನವನ್ನು ಮಾಡಲು ಹಾಗೂ ಮಾನವ ಅಭಿವೃದ್ಧಿ ಸೂಚ್ಯಂಕಗಳಲ್ಲಿ ಆಗಿರುವ ಬೆಳವಣಿಗೆಯ ಬಗ್ಗೆ ಪರಿಶೀಲಿಸಲು ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಕಳೆದ 10 ವರ್ಷಗಳಿಂದ ಕಾಯ್ದೆಯನ್ನು ಅನುಷ್ಠಾನ ಮಾಡುತ್ತಿದ್ದರೂ. ಎಸ್.ಸಿ/ಎಸ್.ಟಿ ಜನರ ಜೀವನ ಮಟ್ಟದಲ್ಲಿ ಪ್ರಮುಖ ಬದಲಾವಣೆಗಳನ್ನು ಕಾಣಲು ಸಾಧ್ಯವಾಗುತ್ತಿಲ್ಲ. ಶಿಕ್ಷಣ ಮತ್ತು ಆರ್ಥಿಕ ಚಟುವಟಿಕೆಗಳಿಗೆ ಹೆಚ್ಚಿನ ಆದ್ಯತೆಯನ್ನು ನೀಡಿದಲ್ಲಿ. ಬದಲಾವಣೆ ಕಾಣಲು ಸಾಧ್ಯವಿದೆ. ಆದ್ದರಿಂದ

ಶಿಕ್ಷಣ. ಕೌಶಲ್ಯಾಭಿವೃದ್ಧಿ ಇಲಾಖೆ. ಕೃಷಿ. ಮತ್ತು ತೋಟಗಾರಿಕೆ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳೊಂದಿಗೆ. ಸರ್ಕಾರದ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು ಆಗಾಗ್ಗೆ ಸಭೆ ನಡೆಸಿ ಪ್ರಗತಿ ಪರಿಶೀಲಿಸಬೇಕೆಂದು ತಿಳಿಸಿದರು.

ಮಾನ್ಯ ಮುಖ್ಯಮಂತ್ರಿಗಳು ಪ್ರಸಕ್ತ ಸಾಲಿನಲ್ಲಿ ಜುಲೈ-2023ರ ಅಂತ್ಯದವರೆಗಿನ ವೆಚ್ಚದ ವಿವರಗಳನ್ನು ಕೇಳಲಾಗಿ. ಒಟ್ಟು ಹಂಚಿಕೆ ರೂ.34.293.69 ಕೋಟಿಗಳಲ್ಲಿ ಮುಂದುವರೆದ ಕಾರ್ಯಕ್ರಮಗಳಿಗೆ ರೂ.2.009.44 ಕೋಟಿಗಳನ್ನು ವೆಚ್ಚ ಮಾಡಲಾಗಿದೆ ಎಂದು ಸಭೆಯ ಗಮನಕ್ಕೆ ತರಲಾಯಿತು.

ಕ್ರಿಯಾ ಯೋಜನೆ ಅನುಮೋದನೆಯಾದ ನಂತರ ಎಲ್ಲಾ ಇಲಾಖೆಗಳು ಒಟ್ಟು ಅನುದಾನವನ್ನು ಸಮರ್ಪಕವಾಗಿ ವೆಚ್ಚ ಮಾಡಲು ಮಾನ್ಯ ಮುಖ್ಯಮಂತ್ರಿಗಳು ನಿರ್ದೇಶನ ನೀಡಿದರು. ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಕಾರ್ಯಕ್ರಮಗಳನ್ನು 2014-15ನೇ ಸಾಲಿನಿಂದ ಜಾರಿಗೆ ತರಲಾಗಿದ್ದು. ಕಳೆದ 9 ವರ್ಷಗಳಲ್ಲಿ ಎಸ್.ಸಿ/ಎಸ್.ಟಿ ಜನರಿಗೆ ಆಗಿರುವ ಪ್ರಯೋಜನದ ಬಗ್ಗೆ ಯೋಜನೆಗಳ ಮೌಲ್ಯಮಾಪನವನ್ನು ಮಾಡಿ ವರದಿ ಸಲ್ಲಿಸಲು ಸೂಚಿಸಿದರು. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನರ ಆರ್ಥಿಕ ಮತ್ತು ಶೈಕ್ಷಣಿಕ ಅಭಿವೃದ್ಧಿಗೆ ಆದ್ಯತೆ ನೀಡಬೇಕಾಗಿದೆ. ಇಲ್ಲದಿದ್ದಲ್ಲಿ. ಸಮಾಜದಲ್ಲಿ ಸಮಾನತೆ ತರಲು ಸಾಧ್ಯವಾಗುವುದಿಲ್ಲ. ಈ ನಿಟ್ಟಿನಲ್ಲಿ ಎಲ್ಲಾ ಅಧಿಕಾರಿಗಳು ಕಡ್ಡಾಯವಾಗಿ ಬದ್ಧತೆಯಿಂದ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡತಕ್ಕದ್ದು ಎಂದು ತಿಳಿಸಿದರು.

ಈಗಾಗಲೇ ಕೆಲವು ಸಂಸ್ಥೆಗಳ ಮೂಲಕ ಮೌಲ್ಯಮಾಪನವನ್ನು ಮಾಡಿಸಲಾಗುತ್ತಿದ್ದು. ಮಧ್ಯಂತರ ವರದಿಯನ್ನು ಸಲ್ಲಿಸಿರುತ್ತಾರೆ. ಅಂತಿಮ ವರದಿಯನ್ನು ಪಡೆದು ಮಾನ್ಯ ಮುಖ್ಯಮಂತ್ರಿಗಳ ಅವಗಾಹನೆಗೆ ಸಲ್ಲಿಸಲಾಗುವುದು ಎಂದು ಸಭೆಯ ಗಮನಕ್ಕೆ ತರಲಾಯಿತು.

ಮಾನ್ಯ ಪರಿಶಿಷ್ಟ ವರ್ಗಗಳ ಕಲ್ಯಾಣ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರಾದ ಶ್ರೀ ಬಿ. ನಾಗೇಂದ್ರ ಇವರು ಆಶ್ರಮ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ಒದಗಿಸುತ್ತಿಲ್ಲ ಮತ್ತು ವಿದ್ಯಾರ್ಥಿಗಳಿಗೆ ಓದುವ ಮತ್ತು ಬರೆಯುವ ಸಾಮರ್ಥ್ಯ ಇರುವುದಿಲ್ಲ ಎಂದು ಹೇಳಿದರು. ಮಾನ್ಯ ಸಮಾಜ ಕಲ್ಯಾಣ ಸಚಿವರು ಮಾತನಾಡಿ. ಲೋಪದೋಷಗಳ ಬಗ್ಗೆ ತದನಂತರ ಚರ್ಚಿಸಬಹುದು. ಈಗ ಇಲಾಖಾವಾರು ಕ್ರಿಯಾ ಯೋಜನೆಗೆ ಅನುಮೋದನೆ ನೀಡಬೇಕಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ರಾಜ್ಯ ಅಭಿವೃದ್ಧಿ ಪರಿಷತ್ತಿನ ಸದಸ್ಯರು ಮತ್ತು ಮಾನ್ಯ ಶಾಸಕರಾದ ಶ್ರೀ ಪ್ರಸಾದ್ ಅಬ್ಬಯ್ಯ ಇವರು ಮಾತನಾಡಿ. Single window ಮಾದರಿಯಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದಲೇ ಅನುದಾನ ಹಂಚಿಕೆ ಮಾಡುವುದು ಸೂಕ್ತವಾಗಿದೆ. ಆದರೆ. ಆರ್ಥಿಕ ಇಲಾಖೆಯಿಂದ ಅನುದಾನ ಹಂಚಿಕೆ ಮಾಡುತ್ತಿರುವುದು ಸರಿಯಲ್ಲ. ಯಾವುದೇ ಇಲಾಖೆಗೆ ಫಲಾನುಭವಿಗಳ ಸಂಖ್ಯೆಗಿಂತ ಹೆಚ್ಚಿನ ಅನುದಾನ ಹಂಚಿಕೆಯಾಗಿದ್ದಲ್ಲಿ. ಆ ಅನುದಾನವನ್ನು ಹಿಂಪಡೆದು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಮರು ಹಂಚಿಕೆ ಮಾಡುವಂತೆ ಕೋರಿದರು. ಹಿಂದಿನ ವರ್ಷಗಳಲ್ಲಿ ಎಸ್.ಟಿ/ಎಸ್.ಟಿ ಯವರಿಗೆ ಕಡಿಮೆ ಕೈಗಾರಿಕಾ ನಿವೇಶನಗಳು ಹಂಚಿಕೆಯಾಗಿದ್ದು. ಇತ್ತೀಚೆಗೆ ಸಹಾಯಧನ ಮೊತ್ತ ಹೆಚ್ಚಿಸಿರುವುದರಿಂದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ದಿಮೆದಾರರ ಬೇಡಿಕೆ ಹೆಚ್ಚಾಗಿರುತ್ತದೆ. ಹಿಂದಿನ ಬ್ಯಾಕ್‌ಲಾಗ್ ಸೇರಿಸಿ ಕೆ.ಐ.ಎ.ಡಿ.ಬಿ ಮತ್ತು ಕೆ.ಎಸ್.ಎಸ್.ಐ.ಡಿ.ಸಿ ಯಲ್ಲಿ ಕಡ್ಡಾಯವಾಗಿ 24.10% ಕೈಗಾರಿಕೆ ನಿವೇಶನ ಮತ್ತು ಶೆಡ್‌ಗಳನ್ನು ಎಸ್.ಸಿ/ಎಸ್.ಟಿ ಜನರಿಗೆ

ಒದಗಿಸಲು ಕ್ರಮವಹಿಸುವಂತೆ ಕೋರಿದರು. ಆದರೆ. ಕೆ.ಐ.ಎ.ಡಿ.ಬಿ ಯಿಂದ ಪಡೆದ ಕೈಗಾರಿಕಾ ನಿವೇಶನಗಳಿಗೆ ಸರ್ಕಾರದಿಂದ ಸಹಾಯಧನ ನೀಡಿದ್ದು. ಆ ನಿವೇಶನಗಳನ್ನು ಕೆ.ಎಸ್.ಎಫ್.ಸಿ ಅಧಿಕಾರಿಗಳು ಸಮಾನಾಂತರ ಖಾತ್ರಿಗೆ ಪರಿಗಣಿಸದೇ ಇರುವುದನ್ನು ಮತ್ತು ಫಲಾನುಭವಿಗಳ ವಂತಿಕೆಯನ್ನು ಕಂತುಗಳಲ್ಲಿ ಪಾವತಿಸುವ ಬಗ್ಗೆ ಕೆ.ಎಸ್.ಎಫ್.ಸಿ ಗೆ ಸೂಕ್ತ ನಿರ್ದೇಶನ ನೀಡುವಂತೆ ಕೋರಿದರು.

ಸದರಿ ವಿಷಯದ ಬಗ್ಗೆ. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ. ಆರ್ಥಿಕ ಇಲಾಖೆ ಇವರು ಮಾತನಾಡಿ ಪ್ರಸ್ತಾಪಿಸಿರುವ ವಿಷಯದ ಬಗ್ಗೆ ಕೆ.ಎಸ್.ಎಫ್.ಸಿ ಅಧಿಕಾರಿಗಳೊಂದಿಗೆ ಚರ್ಚಿಸಿ ಸದರಿ ಸಮಸ್ಯೆ ಪರಿಹರಿಸುವ ದಿಸೆಯಲ್ಲಿ ಕ್ರಮವಹಿಸಲಾಗುವುದೆಂದು ತಿಳಿಸಿದರು.

ರಾಜ್ಯ ಅಭಿವೃದ್ಧಿ ಪರಿಷತ್ತಿನ ಸದಸ್ಯರು ಮತ್ತು ಮಾನ್ಯ ಶಾಸಕರಾದ ಶ್ರೀ ನರೇಂದ್ರ ಸ್ವಾಮಿ ರವರು ಮಾತನಾಡಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರು ಉನ್ನತ ಶಿಕ್ಷಣ ಪಡೆಯಲು ಅವಕಾಶ ಕಲ್ಪಿಸಬೇಕಾಗಿದ್ದು. ಉನ್ನತ ಶಿಕ್ಷಣಕ್ಕೆ ಹೆಚ್ಚಿನ ಅನುದಾನ ಒದಗಿಸುವಂತೆ ಕೋರಿದರು. ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಸಂಶೋಧನಾ ವಿದ್ಯಾರ್ಥಿಗಳಿಗೆ ಶಿಷ್ಯವೇತನ ನೀಡಲು ಮತ್ತು ಉನ್ನತ ಶಿಕ್ಷಣ ಪಡೆಯುತ್ತಿರುವ ಎಲ್ಲಾ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಇತ್ಯಾದಿಗಳನ್ನು ಒದಗಿಸಬೇಕೆಂದು ತಿಳಿಸಿದರು. ಕ್ರೈಸ್ ಸಂಸ್ಥೆಯ ವಸತಿ ಶಾಲೆಗಳಲ್ಲಿ ಬಹಳಷ್ಟು ಬೋಧಕರ ಹುದ್ದೆಗಳ ಖಾಲಿ ಇದ್ದು. ಗುಣಮಟ್ಟದ ಶಿಕ್ಷಣವನ್ನು ನೀಡಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಖಾಯಂ ಶಿಕ್ಷಕರನ್ನು ಕೂಡಲೇ ನೇಮಕ ಮಾಡಲು ಕ್ರಮವಹಿಸುವಂತೆ ಸಲಹೆ ನೀಡಿದರು. ವಸತಿ ಶಾಲೆಗಳ ಕಟ್ಟಡ ನಿರ್ಮಾಣದ ಬಗ್ಗೆ ಹಲವು ವರ್ಷಗಳಿಂದ ಒಂದೇ ಸಂಸ್ಥೆಯ ಪಿ.ಎಂ.ಸಿ ಕಾರ್ಯನಿರ್ವಹಿಸುತ್ತಿದ್ದು. ಇದೇ ಸಂಸ್ಥೆಯನ್ನು ಮುಂದುವರೆಸುವುದು ಸೂಕ್ತವಲ್ಲವೆಂದು ಮತ್ತು ಆ ಸಂಸ್ಥೆಯನ್ನು ತೆಗೆದುಹಾಕಬೇಕೆಂದು ತಿಳಿಸಿದರು.

ಸರ್ಕಾರಿ ಶಾಲೆಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ದಾಖಲಾಗುತ್ತಿರುವ ಕಾರಣ ಪ್ರಾಥಮಿಕ ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅನುದಾನ ನೀಡಬೇಕು. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ಸಣ್ಣ ಪುಟ್ಟ ಪತ್ರಿಕೆಗಳಿಗೆ ಜಾಹೀರಾತಿಗೆ ಹಣ ನೀಡಲಾಗುತ್ತಿದ್ದು. ಎಸ್.ಸಿ/ಎಸ್.ಟಿ ಜನರ ಮಾಲೀಕತ್ವದಲ್ಲಿ ದೊಡ್ಡ ಪತ್ರಿಕೆಗಳು ಇರುವುದಿಲ್ಲ. ಸ್ಮಾರ್ಟ್‌ಸಿಟಿ. ಬಸ್ ಶೆಲ್ಟರ್‌ಗಳಲ್ಲಿ ಎಸ್.ಸಿ/ಎಸ್.ಟಿ ಕಂಪನಿಗಳು ಪಾಲ್ಗೊಂಡು ಬಂಡವಾಳ ಹೂಡಿಕೆ ಮಾಡಿದ್ದರೂ ಈ ಸಂಸ್ಥೆಗಳಿಗೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ಜಾಹೀರಾತು ನೀಡಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಎಸ್.ಸಿ/ಎಸ್.ಟಿ ಸಂಸ್ಥೆಗಳಿಗೆ ಜಾಹೀರಾತುಗಳಲ್ಲಿ 24.10% ನಿಗದಿಪಡಿಸುವಂತೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಗೆ ಮಾರ್ಗಸೂಚಿಗಳನ್ನು ನೀಡುವ ಬಗ್ಗೆ ತಿಳಿಸಿದರು. ಸಮಾಜದ ಕಟ್ಟಕಡೆಯ ವ್ಯಕ್ತಿಗೆ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಸೌಲಭ್ಯ ತಲುಪಿಸಲು ಕ್ರಮವಹಿಸುವಂತೆ ತಿಳಿಸಿದರು.

ಸ್ಥಳೀಯ ಅನುಷ್ಠಾನ ಅಧಿಕಾರಿಗಳು ಶಾಮೀಲಾಗಿ ಕೃಷಿ. ತೋಟಗಾರಿಕೆ. ರೇಷ್ಮೆ ಇಲಾಖೆಗಳಲ್ಲಿ ಒಬ್ಬ ಫಲಾನುಭವಿಗೆ ಮೂರು ಇಲಾಖೆಗಳಿಂದ ಸೌಲಭ್ಯ ಮತ್ತು ಒಂದೇ ಇಲಾಖೆಯಿಂದ ವಿವಿಧ ಕಾರ್ಯಕ್ರಮಗಳಲ್ಲಿ ಒಂದೇ ಫಲಾನುಭವಿಗೆ ಸೌಲಭ್ಯಗಳನ್ನು ಒದಗಿಸಲಾಗುತ್ತಿದ್ದು. ಇದನ್ನು ಸರಿಪಡಿಸುವ ಬಗ್ಗೆ ಇಲಾಖಾ ಅಧಿಕಾರಿಗಳು ಕ್ರಮವಹಿಸಬೇಕೆಂದು ತಿಳಿಸಿದರು.

ಕೊಳಚೆ ಮಂಡಳಿಯಿಂದ ನಿರ್ಮಿಸಲಾಗುತ್ತಿರುವ ಮನೆಗಳಿಗೆ ಫಲಾನುಭವಿಗಳು ಬಡವರಾಗಿದ್ದು. ವಂತಿಕೆ ಭರಿಸಲು ಸಾಧ್ಯವಾಗದೇ ಇರುವ ಕಾರಣ ಮನೆಗಳ ನಿರ್ಮಾಣ

ಪೂರ್ಣಗೊಳಿಸಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಫಲಾನುಭವಿಗಳ ವಂತಿಕೆಯನ್ನು ಎಸ್.ಸಿ.ಎಸ್.ಪಿ/ ಟಿ.ಎಸ್.ಪಿ ಅನುದಾನದಡಿ ಭರಿಸಲು ಕ್ರಮಕೈಗೊಳ್ಳುವಂತೆ ಕೋರಿದರು. ಮಾನ್ಯ ಸದಸ್ಯರಾದ ಡಾ. ಎಲ್. ಹನುಮಂತಯ್ಯ ಮತ್ತು ಶ್ರೀ ಪ್ರಸಾದ್ ಅಬ್ಬಯ್ಯ ಇವರು ಈ ಬಗ್ಗೆ ಮಾತನಾಡಿ, ಸಿಮೆಂಟ್, ಸ್ಟೀಲ್ ದರಗಳು ಹೆಚ್ಚಾಗಿರುವುದರಿಂದ ಹಾಲಿ ಇರುವ ವಸತಿ ಘಟಕ ವೆಚ್ಚದಲ್ಲಿ ಮನೆಗಳ ನಿರ್ಮಾಣ ಸಾಧ್ಯವಾಗದೇ ಇರುವ ಕಾರಣ ಸರ್ಕಾರದಿಂದಲೇ ಮನೆ ಕಟ್ಟಿಸಿಕೊಡುವಂತೆ ಸಲಹೆ ನೀಡಿದರು.

ರಾಜ್ಯ ಅಭಿವೃದ್ಧಿ ಪರಿಷತ್ತಿನ ಸದಸ್ಯರು ಮತ್ತು ಮಾನ್ಯ ಸಂಸದರಾದ ಡಾ. ಎಲ್. ಹನುಮಂತಯ್ಯ ರವರು ಮಾತನಾಡಿ, ಬಾಡಿಗೆ ಕಟ್ಟಡದಲ್ಲಿರುವ ಕ್ರೈಸ್ ವಸತಿ ಶಾಲೆಗಳ ಮತ್ತು ಇಲಾಖೆಯ ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣಕ್ಕೆ ಹೆಚ್ಚಿನ ಅನುದಾನ ಒದಗಿಸಬೇಕು. ಇತ್ತೀಚಿನ ವರ್ಷಗಳಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಉದ್ದಿಮೆದಾರರು ಸಹಾಯಧನ ಯೋಜನೆಯಡಿ ಕೈಗಾರಿಕಾ ನಿವೇಶನಗಳನ್ನು ಪಡೆಯುತ್ತಿದ್ದು, ಕೆ.ಐ.ಎ.ಡಿ.ಬಿ ಗೆ ಕೈಗಾರಿಕಾ ನಿವೇಶನ ಹಂಚಿಕೆಗಾಗಿ ಸರ್ಕಾರದಿಂದ ಸಹಾಯಧನ ಪಾವತಿಸಲು ಸುಮಾರು ರೂ.1,000 ಕೋಟಿ ಬಾಕಿ ಇದ್ದು, ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಬೇಕೆಂದು ಕೋರಿದರು. ಸಮಾಜ ಕಲ್ಯಾಣ ಇಲಾಖೆಯ ನಿಗಮಗಳಿಗೆ ಹೆಚ್ಚಿನ ಅನುದಾನ ಒದಗಿಸಬೇಕಾಗಿದೆ. ರೂ.5.00 ಲಕ್ಷದವರೆಗೆ ನಿಗಮಗಳಿಂದ/ ಬ್ಯಾಂಕ್‌ಗಳಿಂದ ಆರ್ಥಿಕ ಚಟುವಟಿಕೆಗಳಿಗಾಗಿ ಬಡ್ಡಿ ರಹಿತ ಸಾಲವನ್ನು ನೀಡಬೇಕು ಮತ್ತು ಪ್ರಬುದ್ಧ ಯೋಜನೆಯಡಿ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳನ್ನು ವಿದೇಶಿ ವಿಶ್ವವಿದ್ಯಾಲಯಗಳಿಗೆ ಕಳುಹಿಸುವ ಬಗ್ಗೆ ಕ್ರಮವಹಿಸಬೇಕೆಂದು ಕೋರಿದರು.

ಮುಂದುವರೆದು, ವೈದ್ಯಕೀಯ ಮತ್ತು ಇತರ ಕಾಲೇಜುಗಳಲ್ಲಿ ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳಿಗೆ ಪ್ರವೇಶ ಸಮಯದಲ್ಲಿ ಶುಲ್ಕ ಪಾವತಿಸಲು ಒತ್ತಾಯಿಸುತ್ತಿದ್ದು, ಬಡ ವಿದ್ಯಾರ್ಥಿಗಳಿಗೆ ಶುಲ್ಕ ಪಾವತಿಸಲು ಸಾಧ್ಯವಾಗುತ್ತಿಲ್ಲದಿರುವುದರಿಂದ ಶುಲ್ಕ ಪಡೆಯದೇ ಪ್ರವೇಶ ನೀಡಲು ಮತ್ತು ತದನಂತರ, ಕಾಲೇಜುಗಳಿಗೆ ಸರ್ಕಾರದಿಂದ ಶುಲ್ಕ ಪಾವತಿಸುವ ಬಗ್ಗೆ ನಿರ್ದೇಶನ ನೀಡಬೇಕೆಂದು ಕೋರಿದರು.

ಮಾನ್ಯ ಸಮಾಜ ಕಲ್ಯಾಣ ಸಚಿವರು ಮಾತನಾಡಿ, ಉನ್ನತ ಶಿಕ್ಷಣ ಇಲಾಖೆಯ ಮಾನ್ಯ ಸಚಿವರೊಂದಿಗೆ ಚರ್ಚಿಸಿ ಪ್ರವೇಶ ಸಮಯದಲ್ಲಿ ವಿದ್ಯಾರ್ಥಿಗಳಿಂದ ಶುಲ್ಕ ವಸೂಲು ಮಾಡದೇ ಪ್ರವೇಶ ನೀಡಲು ಈಗಾಗಲೇ ಎಲ್ಲಾ ಸಂಸ್ಥೆಗಳಿಗೆ ಸುತ್ತೋಲೆ ಮೂಲಕ ನಿರ್ದೇಶನ ನೀಡಲಾಗಿದೆ ಎಂದು ತಿಳಿಸಿದರು.

ರಾಜ್ಯ ಅಭಿವೃದ್ಧಿ ಪರಿಷತ್ತಿನ ಸದಸ್ಯರು ಮತ್ತು ಮಾನ್ಯ ಶಾಸಕರಾದ ಶ್ರೀ ಇ. ತುಕಾರಾಂ ರವರು ಮಾತನಾಡಿ, ಐದು ಗ್ಯಾರಂಟಿ ಯೋಜನೆಗಳೊಂದಿಗೆ ಉಳಿದ ಕಾರ್ಯಕ್ರಮಗಳನ್ನು ಸಹ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಮತ್ತು ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಒದಗಿಸಲು, ಪಿಹೆಚ್‌ಡಿ ವಿದ್ಯಾರ್ಥಿಗಳಿಗೆ ಶಿಷ್ಯವೇತನ ನೀಡಲು ಕ್ರಮವಹಿಸುವಂತೆ ತಿಳಿಸಿದರು.

ರಾಜ್ಯ ಅಭಿವೃದ್ಧಿ ಪರಿಷತ್ತಿನ ಸದಸ್ಯರು ಮತ್ತು ಮಾನ್ಯ ಶಾಸಕರಾದ ಶ್ರೀ ಪ್ರಕಾಶ್ ರಾಥೋಡ್ ರವರು ಮಾತನಾಡಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದಲ್ಲಿ ಅನೇಕ ಉಪಜಾತಿಗಳಿದ್ದು, ಸರ್ಕಾರದ ಯೋಜನೆಗಳಿಂದ ಇದುವರೆಗೆ ಯಾವ ಯಾವ ಉಪಜಾತಿಗಳಿಗೆ ಅನುಕೂಲವಾಗಿದೆ ಎಂಬ ಬಗ್ಗೆ ಮಾಹಿತಿ ನೀಡಲು ಕೋರಿದರು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕ್ರೀಡಾಪಟುಗಳಿಗೆ

ಹೆಚ್ಚಿನ ಅನುದಾನ ಒದಗಿಸಲು ಹಾಗೂ ಇವರಿಗೆ ಸ್ವಂತ ಉದ್ಯೋಗಕ್ಕಾಗಿ ಸಹಾಯಧನ ಮತ್ತು ಸಾಲ ನೀಡಲು ಕ್ರಮವಹಿಸುವಂತೆ ಕೋರಿದರು. ಲಂಬಾಣಿ ತಾಂಡಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವಂತೆ ಸಹ ತಿಳಿಸಿದರು.

ರಾಜ್ಯ ಅಭಿವೃದ್ಧಿ ಪರಿಷತ್ತಿನ ಸದಸ್ಯರು ಮತ್ತು ಮಾನ್ಯ ಸಚಿವರಾದ ಶ್ರೀ ಪ್ರಿಯಾಂಕ್ ಖರ್ಗೆ ರವರು ಮಾತನಾಡಿ. ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಕಾರ್ಯಕ್ರಮಗಳ ಅನುಷ್ಠಾನದ ಪರಿಣಾಮದ ಬಗ್ಗೆ ಮೌಲ್ಯಮಾಪನ ಮಾಡಲು ನನ್ನ ಅವಧಿಯಲ್ಲಿ ಕ್ರಮವಹಿಸಿದ್ದು. ಸದರಿ ವರದಿಯ ಶಿಫಾರಸ್ಸುಗಳನ್ನು ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಅಳವಡಿಸಿಕೊಳ್ಳಲು ಕ್ರಮವಹಿಸುವಂತೆ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು. ವಿದ್ಯಾರ್ಥಿನಿಲಯಗಳ ನಿರ್ವಹಣೆಗೆ ಎಸ್.ಓ.ಪಿ ಗಳನ್ನು ಶಿಫಾರಸ್ಸು ಮಾಡಿರುವ ವರದಿಯನ್ನು ಮಾನ್ಯ ಸಮಾಜ ಕಲ್ಯಾಣ ಸಚಿವರ ಗಮನಕ್ಕೆ ತಂದು ವಿದ್ಯಾರ್ಥಿನಿಲಯಗಳಲ್ಲಿ ಅಗತ್ಯ ಸೌಲಭ್ಯಗಳನ್ನು ಒದಗಿಸಲು ತಿಳಿಸಿದರು.

ರಾಜ್ಯ ಅಭಿವೃದ್ಧಿ ಪರಿಷತ್ತಿನ ಸದಸ್ಯರು ಮತ್ತು ಮಾನ್ಯ ಸಚಿವರಾದ ಡಾ. ಎಂ.ಸಿ. ಸುಧಾಕರ್ ರವರು ಮಾತನಾಡಿ. ಉನ್ನತ ಶಿಕ್ಷಣ ಇಲಾಖೆಯ ಮೂಲಕ ನಿರ್ಮಿಸಿರುವ ವಸತಿ ನಿಲಯಗಳನ್ನು ಬಜೆಟ್ ಘೋಷಣೆಯಂತೆ ಸಮಾಜ ಕಲ್ಯಾಣ ಇಲಾಖೆ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗಳ ವಶಕ್ಕೆ ಪಡೆಯಲು ಕ್ರಮವಹಿಸುವಂತೆ ಮತ್ತು ಪ್ರಸಕ್ತ ಸಾಲಿನಲ್ಲಿ ಉನ್ನತ ಶಿಕ್ಷಣ ಇಲಾಖೆಗೆ ಹಂಚಿಕೆ ಮಾಡಿರುವ ಅನುದಾನ ಹಿಂಪಡೆಯದಂತೆ ತಿಳಿಸಿದರು. ಇಲಾಖೆಗೆ ಹಿಂದಿನ ವರ್ಷ ಮತ್ತು ಪ್ರಸ್ತುತ ವರ್ಷದಲ್ಲಿ ನೀಡಿರುವ ಅನುದಾನವನ್ನು ವೆಚ್ಚ ಮಾಡಲು ಕ್ರಮವಹಿಸಲಾಗುತ್ತಿದೆ ಎಂದು ತಿಳಿಸಿದರು.

ರಾಜ್ಯ ಅಭಿವೃದ್ಧಿ ಪರಿಷತ್ತಿನ ಸದಸ್ಯರು ಮತ್ತು ಮಾನ್ಯ ಸಚಿವರಾದ ಶ್ರೀ ಹೆಚ್.ಕೆ. ಪಾಟೀಲ್ ಇವರು ಮಾತನಾಡಿ. ಎಸ್.ಸಿ/ಎಸ್.ಟಿ ಕಾಲೋನಿಗಳಲ್ಲಿ ಚರಂಡಿ ನೀರು ಒಂದು ಕಡೆ ನಿಲ್ಲುತ್ತಿದ್ದು. ಮುಂದೆ ಹರಿಯುವ ಸಲುವಾಗಿ drainage ಗಳನ್ನು ಕನಿಷ್ಟ 250 ಮೀ. ಮುಂದುವರೆಸುವ ಅಗತ್ಯವಿದೆ. ಕ್ರೀಡಾ ಮತ್ತು ಶೈಕ್ಷಣಿಕ ಚಟುವಟಿಕೆಗಳಿಗೆ ಹೆಚ್ಚಿನ ಅನುದಾನ ಒದಗಿಸಬೇಕು ಹಾಗೂ ಅಲೆಮಾರಿ/ಅರೆ ಅಲೆಮಾರಿ ಸಮುದಾಯಗಳಾದ ಘಂಟಿಚೋರ್. ಹರಿಣ್‌ಶಿಕಾರಿ ಇತ್ಯಾದಿ ಸಮುದಾಯಗಳಿಗೆ ವಸತಿ ಇತ್ಯಾದಿ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ತಿಳಿಸಿದರು.

ಮಾನ್ಯ ಸಮಾಜ ಕಲ್ಯಾಣ ಸಚಿವರು ಮಾತನಾಡಿ. ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದವರು ಬಹಳ ವರ್ಷಗಳಿಂದ ಶೋಷಣೆಗೆ ಒಳಗಾಗಿದ್ದು. ಅವರ ಸಬಲೀಕರಣಕ್ಕಾಗಿ ಎಲ್ಲಾ ಇಲಾಖೆಗಳು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಫಲಾನುಭವಿಗಳ ಸಂಖ್ಯೆಗೆ ಅನುಗುಣವಾಗಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅನುದಾನವನ್ನು ಜಿಲ್ಲೆ. ತಾಲ್ಲೂಕು ಮತ್ತು ವಿಧಾನಸಭಾ ಕ್ಷೇತ್ರಗಳಿಗೆ ಹಂಚಿಕೆ ಮಾಡಿ ಅನುಷ್ಠಾನ ಮಾಡಬೇಕೆಂದು ಹಾಗೂ ಈ ಅನುದಾನವನ್ನು ಇತರೆ ಜನರಿಗೆ ಉಪಯೋಗಿಸತಕ್ಕದ್ದಲ್ಲ ಎಂದು ತಿಳಿಸಿದರು. ಗಂಗಾ ಕಲ್ಯಾಣ ಹಾಗೂ ಇತರೆ ಯೋಜನೆಗಳಡಿ ಹಿಂದಿನ ಸಾಲಿನಲ್ಲಿ ಅನುಷ್ಠಾನವಾಗದೇ ಇದ್ದಲ್ಲಿ ಆ ಗುರಿಗಳನ್ನು ಪ್ರಸಕ್ತ ಸಾಲಿನ ಗುರಿಯೊಂದಿಗೆ ಸೇರಿಸಿಕೊಂಡು ಅನುಷ್ಠಾನ ಮಾಡತಕ್ಕದ್ದು ಎಂದು ತಿಳಿಸಿದರು.

ಸಮಾಜ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಮಾತನಾಡಿ ಎಸ್.ಸಿ/ಎಸ್.ಟಿ ನಿಗಮಗಳಿಂದ ಫಲಾನುಭವಿಗಳ ಆಯ್ಕೆಯನ್ನು ಮಾನ್ಯ ಶಾಸಕರುಗಳಿಂದ ಮಾಡಲಾಗುತ್ತಿದ್ದು.

ಸೆಪ್ಟೆಂಬರ್ ಅಂತ್ಯದೊಳಗೆ ಆಯ್ಕೆ ಮಾಡಿದಲ್ಲಿ. ಕಾರ್ಯಕ್ರಮ ಅನುಷ್ಠಾನದಲ್ಲಿ ವಿಳಂಬವಾಗುವುದಿಲ್ಲವೆಂದು ತಿಳಿಸಿದರು. ಸೆಪ್ಟೆಂಬರ್ ಅಂತ್ಯದೊಳಗೆ ಆಯ್ಕೆ ಮಾಡದೇ ಇದ್ದಲ್ಲಿ, ಮಾನ್ಯ ಸಮಾಜ ಕಲ್ಯಾಣ ಸಚಿವರ ಅವಗಾಹನೆಗೆ ತಂದು ಫಲಾನುಭವಿಗಳನ್ನು ಆಯ್ಕೆ ಮಾಡುವ ಬಗ್ಗೆ ಸೂಕ್ತ ಕ್ರಮವಹಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

**ಎಲ್ಲಾ ವಿಷಯಗಳ ಬಗ್ಗೆ ಚರ್ಚಿಸಿದ ನಂತರ ಅಂತಿಮವಾಗಿ ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನಂತೆ ಪ್ರಮುಖ ಸೂಚನೆಗಳನ್ನು ನೀಡಿದರು.**

1. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ವೈಯಕ್ತಿಕ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಆದ್ಯತೆ ನೀಡಲು ಹಾಗೂ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅನುದಾನವನ್ನು ಇತರೆ ಸಾಮಾನ್ಯ ಕಾರ್ಯಕ್ರಮಗಳಿಗೆ ಬಳಸದಂತೆ ಸೆಕ್ಷನ್ 7(ಡಿ)ಯನ್ನು ಕೈಬಿಡಲು ಈಗಾಗಲೇ ಘೋಷಿಸಲಾಗಿದ್ದು. ಅದರಂತೆ ಕ್ರಮವಹಿಸಲಾಗುತ್ತಿದೆ.

2. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಭೂ ಪರಭಾರೆ ನಿಷೇಧ ಕಾಯ್ದೆಗೆ (ಪಿಟಿಸಿಎಲ್) ತಿದ್ದುಪಡಿಯನ್ನು ತರಲಾಗಿರುತ್ತದೆ. ಅಂದಾಜು ವೆಚ್ಚ ರೂ.1.00 ಕೋಟಿಗಳ ಕಾಮಗಾರಿಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಗುತ್ತಿಗೆದಾರರಿಗೆ ಮೀಸಲಾತಿ ಮತ್ತು ಉದ್ಯಮಿಗಳಿಗೆ ಶೇ.4 ರ ಬಡ್ಡಿ ದರದಲ್ಲಿ ರೂ.10.00 ಕೋಟಿಗಳವರೆಗೆ ಸಾಲ ಮತ್ತು ಕೈಗಾರಿಕಾ ನಿವೇಶನಗಳಿಗೆ ಸಹಾಯಧನ ಹೀಗೆ ಹಲವು ಕಾರ್ಯಕ್ರಮಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಅಭಿವೃದ್ಧಿಗೆ ಜಾರಿಗೆ ತರಲಾಗಿದೆ.

3. ಶೈಕ್ಷಣಿಕ ಅಭಿವೃದ್ಧಿಗೆ ಆದ್ಯತೆಯನ್ನು ನೀಡಲಾಗುತ್ತಿದ್ದು. ಎಲ್ಲಾ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣವನ್ನು ನೀಡಲು ಕ್ರೈಸ್ ವಸತಿ ಶಾಲೆಗಳಲ್ಲಿ ಆಯಾ ತಾಲ್ಲೂಕು ವ್ಯಾಪ್ತಿಯಲ್ಲಿ ಇರುವ ವಸತಿ ಶಾಲೆಗಳಲ್ಲಿ ಆ ತಾಲ್ಲೂಕಿನ ವಿದ್ಯಾರ್ಥಿಗಳಿಗೆ 60% ಮತ್ತು ಆ ಜಿಲ್ಲೆಯ ವಿದ್ಯಾರ್ಥಿಗಳಿಗೆ 40% ಅನುಪಾತದಲ್ಲಿ ಇನ್ನು ಮುಂದೆ ಪ್ರವೇಶ ನೀಡುವ ಬಗ್ಗೆ ಸರ್ಕಾರದ ಆದೇಶ ಹೊರಡಿಸಲು ಸೂಚಿಸಿದರು.

4. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಆರ್ಥಿಕವಾಗಿ ಸಬಲರಾಗಬೇಕಾದರೆ ಶಿಕ್ಷಣ ಅತೀ ಅಗತ್ಯ. ಆದ್ದರಿಂದ ಪರಿಶಿಷ್ಟ ಜಾತಿ/ಪಂಗಡದ ಎಲ್ಲಾ ವಿದ್ಯಾರ್ಥಿಗಳಿಗೆ ಕಡ್ಡಾಯವಾಗಿ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶ ನೀಡಬೇಕು ಹಾಗೂ ಅಗತ್ಯವಿದ್ದಲ್ಲಿ ವಿದ್ಯಾಸಿರಿ ಕಾರ್ಯಕ್ರಮವನ್ನು ಅನುಷ್ಠಾನ ಮಾಡಲು ಸೂಚಿಸಿದರು.

5. ನಿವೇಶನ ರಹಿತ ವಿದ್ಯಾರ್ಥಿನಿಲಯ ಮತ್ತು ಕ್ರೈಸ್ ವಸತಿ ಶಾಲೆಗಳಿಗೆ ಅಗತ್ಯವಿರುವ ನಿವೇಶನಗಳನ್ನು ಪಡೆಯಲು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯಲು ಸೂಚಿಸಿದರು.

6. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಸ್ಮಶಾನ ವ್ಯವಸ್ಥೆ ಮಾಡಬೇಕಾಗಿದ್ದು. ಎಲ್ಲಾ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು ಸರ್ಕಾರಿ ಜಮೀನು ಇದ್ದಲ್ಲಿ ಮಂಜೂರು ಮಾಡಲು ಅಥವಾ ಖಾಸಗಿ ಜಮೀನನ್ನು ಖರೀದಿಸಿ ಅಭಿವೃದ್ಧಿ ಪಡಿಸಲು ಕ್ರಮವಹಿಸುವಂತೆ ಸೂಚಿಸಿದರು.

7. ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ರೂ.34.293.69 ಕೋಟಿಗಳನ್ನು ಎಸ್.ಸಿ.ಎಸ್.ಪಿ/ ಟಿ.ಎಸ್.ಪಿ ಕಾರ್ಯಕ್ರಮಗಳಿಗೆ ಒದಗಿಸಿದ್ದು. ಉಳಿಕೆ ಇರುವ 8 ತಿಂಗಳ ಅವಧಿಯಲ್ಲಿ ಪೂರ್ಣ ಅನುದಾನ ವೆಚ್ಚ ಮಾಡಲು ಅಗತ್ಯ ಕ್ರಮವಹಿಸುವಂತೆ ಎಲ್ಲಾ ಇಲಾಖೆಗಳ ಅಧಿಕಾರಿಗಳಿಗೆ

ಸೂಚಿಸಿದರು. ಸಮಾಜ ಕಲ್ಯಾಣ ಇಲಾಖೆಯಿಂದ ಈ ಬಗ್ಗೆ ಮೇಲುಸ್ತುವಾರಿ ಮಾಡಿ ಪ್ರಗತಿ ಪರಿಶೀಲಿಸುವಂತೆ ಸೂಚಿಸಿದರು.

8. ರಾಜ್ಯ ಅಭಿವೃದ್ಧಿ ಪರಿಷತ್ ಸಭೆಯನ್ನು 3 ತಿಂಗಳ ನಂತರ ಮತ್ತೊಮ್ಮೆ ನಡೆಸಿ ಪ್ರಗತಿ ಪರಿಶೀಲಿಸುವುದಾಗಿ ತಿಳಿಸಿದರು. ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಕಾರ್ಯಕ್ರಮಗಳಡಿ ಒದಗಿಸಿರುವ ಅನುದಾನವನ್ನು ಎಸ್.ಸಿ/ಎಸ್.ಟಿ ಫಲಾನುಭವಿಗಳ ನಿಖರ ಅಂಕಿ-ಅಂಶಗಳನ್ವಯ ವೆಚ್ಚ ಮಾಡಬೇಕಾಗಿದ್ದು, ಅನುದಾನ ಉಳಿಕೆಯಾದಲ್ಲಿ ಅಗತ್ಯ ಕಾರ್ಯಕ್ರಮಗಳಿಗೆ ಮರು ಹಂಚಿಕೆ ಮಾಡುವ ಬಗ್ಗೆ ನಂತರ ಕ್ರಮವಹಿಸಲು ಸೂಚಿಸಿದರು.

9. ರಾಜ್ಯ ಅಬಿವೃಧ್ಧಿ ಪರಿಷತ್‌ನ ಸದಸ್ಯರು ನೀಡಿರುವ ಅಭಿಪ್ರಾಯ/ ಸಲಹೆಗಳ ಬಗ್ಗೆ ಪರಿಶೀಲಿಸಿ ಕ್ರಮವಹಿಸಲು ಸೂಚಿಸಿದರು.

10. ಇಲಾಖೆಯ ವಿವಿಧ ನಿಗಮಗಳಿಂದ ಅನುಷ್ಟಾನ ಮಾಡುವ ಗಂಗಾ ಕಲ್ಯಾಣ ಇತ್ಯಾದಿ ಯೋಜನೆಗಳಲ್ಲಿ ಆಯ್ಕೆಯಾಗಿ ಅನುಷ್ಟಾನ ಮಾಡದೇ ಇರುವ ಗುರಿಗಳೊಂದಿಗೆ ಪ್ರಸಕ್ತ ಸಾಲಿನ ಗುರಿಯನ್ನು ಸೇರಿಸಿಕೊಂಡು ಅನುಷ್ಟಾನ ಮಾಡಲು ಸೂಚಿಸಿದರು.

11. ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಪಟ್ಟಂತೆ ಪ್ರತ್ಯೇಕ ಪರಿಶೀಲನಾ ಸಭೆಯನ್ನು ನಡೆಸುವುದಾಗಿ ತಿಳಿಸಿದರು.

12. ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅನುದಾನವನ್ನು 100% ವೆಚ್ಚ ಮಾಡಿ ಅರ್ಹ ಫಲಾನುಭವಿಗಳಿಗೆ ಸೌಲಭ್ಯ ಒದಗಿಸಲು ಮತ್ತು ಕರ್ತವ್ಯಲೋಪ ಮತ್ತು ನಿರ್ಲಕ್ಷ್ಯತೆ ತೋರುವಂತಹ ಅಧಿಕಾರಿಗಳ ವಿರುದ್ಧ ಕಟ್ಟುನಿಟ್ಟಿನ ಶಿಸ್ತುಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಅಂತಿಮವಾಗಿ 2023-24ನೇ ಸಾಲಿನ ಎಲ್ಲಾ ಇಲಾಖೆಗಳ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಕಾರ್ಯಕ್ರಮಗಳ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಯಿತು.

ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಸಿದ್ಧರಾಮಯ್ಯ)
ಮುಖ್ಯಮಂತ್ರಿಗಳು ಹಾಗೂ ಅಧ್ಯಕ್ಷರು,
ರಾಜ್ಯ ಅನುಸೂಚಿತ ಜಾತಿಗಳು/
ಅನುಸೂಚಿತ ಪಂಗಡಗಳ
ಅಭಿವೃದ್ಧಿ ಪರಿಷತ್ತು.